ಸರ್ಕಾರದ ಮುಂದೆ ಪ್ರಸ್ತಾಪವಿತ್ತು. ಆದರೆ, ಇದು ದುರುಪಯೋಗವಾಗುವ ಭೀತಿಯಿಂದ ಸರ್ಕಾರ ಒಪ್ಪಿರಲಿಲ್ಲ.

ಸಂಸದ ಹಾಗೂ ವಕೀಲರಾಗಿದ್ದ ಮೀನೂ ಮಸಾನಿ ಅವರು 1981ರಲ್ಲಿ ಮುಂಬೈನಲ್ಲಿ 'ದ ಸೊಸೈಟಿ ಫಾರ್ ದ ರೈಟ್ ಟು ಡೈ ವಿತ್ ಡಿಗ್ನಿಟಿ' ಎಂಬ ಸಂಸ್ಥೆ ಆರಂಭಿಸಿದ್ದರು. ಇದಕ್ಕೆ ನೇತ್ರ ತಜ್ಞ ಡಾ. ಎಂ.ಸಿ. ಮೋದಿ ಅವರು ಮುಖ್ಯ ಪೋಷಕರಾಗಿದ್ದರು. ಇದರ ಶಾಖೆಯೊಂದನ್ನು 'ಲಿವ್ ವೆಲ್ ಅಂಡ್ ಲೀವ್ ವೆಲ್ ಸೊಸೈಟಿ' ಹೆಸರಿನಲ್ಲಿ ಬೆಂಗಳೂರಿನಲ್ಲಿ ಆರಂಭಿಸಲಾಗಿತ್ತು. ಇದಕ್ಕೆ ಹಿರಿಯ ಸಾಹಿತಿ ಗೊ.ರು. ಚನ್ನಬಸಪ್ಪ ಅವರು ಪೋಷಕ ಸದಸ್ಯರಾಗಿದ್ದಾರೆ. ಈ ಸಂಸ್ಥೆಯಲ್ಲಿ ದೇಶ, ವಿದೇಶದವರು ಸದಸ್ಯತ್ವ ಪಡೆದಿದ್ದಾರೆ.



## ದಯಾಮರಣ ಸ್ವಾಗತಾರ್ಹ

ಕ್ಯಾನ್ಸರ್ ಭಯಾನಕವಾದ ಕಾಯಿಲೆ. ಆದರಲ್ಲೂ ಕ್ಯಾನ್ಸರ್ ಕೊನೆಯ ಹಂತವು ರೋಗಿಯನ್ನಷ್ಟೇ ಅಲ್ಲ, ಆತನ ಪರಿವಾರವನ್ನೂ ಮಾನಸಿಕ, ದೈಹಿಕ ಮತ್ತು ಆರ್ಥಿಕವಾಗಿ ಕುಗ್ಗಿಸಿಬಿಡುತ್ತದೆ. ದಯಾಮರಣಕ್ಕೆ ಒಪ್ಪಿಗೆ ಸೂಚಿಸಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಕ್ಯಾನ್ಸರ್‌ನಂಥ ಮಾರಕ ಕಾಯಿಲೆಯ ಕೊನೆಯ ಹಂತದ ರೋಗಿಗಳ ನೋವಿಗೆ ಒಳ್ಳೆಯ ಪರಿಹಾರ. ಈ ತೀರ್ಪು ಖಂಡಿತಾ ಸ್ವೀಕಾರಾರ್ಹ. ಯಾವುದೇ ಚಿಕಿತ್ಸೆ ಇಲ್ಲದೆ, ಬದುಕುವ ಯಾವುದೇ ದಾರಿ ಇಲ್ಲದೇ, ಎಲ್ಲರಿಗೂ ಹೊರೆಯಾಗಿ, ನೋವಿನಿಂದ ಬಳಲುವುದಕ್ಕಿಂತ ತಜ್ಞ ಸಮಿತಿ ಮತ್ತು ಅಷ್ಟು ದಿನ ಉಪಚರಿಸಿದ ವೈದ್ಯರ ಸಲಹೆ ಮತ್ತು ಒಪ್ಪಿಗೆಯ ನಂತರ ಅರ್ಹ ಫಲಾನುಭವಿಗಳಿಗೆ ದಯಾಮರಣ ನೀಡುವುದು ಒಳ್ಳೆಯದು. ಮನುಷ್ಯತ್ವವನ್ನು ಇಲ್ಲಿ ಪರಿಗಣಿಸಿ ಜೀವಿಯು ನರಳುವುದನ್ನು ತಡೆಯಲು ಇಂತಹ ಕಾನೂನು ಖಂಡಿತ ಅವಶ್ಯಕ. ಇದಾಗಲೇ ಕೆಲವು ದೇಶಗಳು ಈ ಕಾನೂನನ್ನು ಸೂಕ್ತ ರೀತಿಯಲ್ಲಿ ಬಳಸುತ್ತಿವೆ. ಭಾರತದಂತಹ ಆರ್ಥಿಕವಾಗಿ ಹಿಂದುಳಿದ ದೇಶದಲ್ಲಿ ಉಳಿಸಲು ಆಗದೇ ಇರುವ ರೋಗಿಗೆ ಆರ್ಥಿಕ ವೆಚ್ಚ ಮಾಡಿ ಪೋಲು ಮಾಡುವುದರ ಬದಲು ಉಳಿಸಲು ಸಾಧ್ಯ ಇರುವ ಎಷ್ಟೋ ಬಡ ರೋಗಿಗಳಿಗೆ ಈ ಹಣ ಸದ್ವಿನಿಯೋಗ ಆಗುತ್ತದೆ.

**–ಡಾ. ರಾಜೀವ್,** ಕ್ಯಾನ್ಸರ್ ತಜ್ಞ, ಅಪೋಲೊ ಆಸ್ಪತ್ರೆ

'ಲಿವ್ ವೆಲ್ ಅಂಡ್ ಲೀವ್ ವೆಲ್ ಸೊಸೈಟಿ'ಸಂಸ್ಥೆಯ ಆಶಯದ ಭಾಗವಾಗಿಯೇ ಎ.ಎಸ್. ರಾವತ್ ಅವರು ರಾಜ್ಯ ಹೈಕೋರ್ಟ್‌ನಲ್ಲಿ 1999ರಲ್ಲಿ ದಯಾಮರಣ ಕುರಿತು ಕಾನೂನು ರೂಪಿಸುವಂತೆ ಅರ್ಜಿ ಸಲ್ಲಿಸಿದ್ದರು. ಕೋರ್ಟ್ ಅದನ್ನು ಮಾನ್ಯ ಮಾಡಿರಲಿಲ್ಲ. ಇದಕ್ಕೂ ಮುನ್ನ ಸುಪ್ರೀಂ ಕೋರ್ಟ್ 1996ರಲ್ಲಿ ಪ್ರಕರಣವೊಂದರಲ್ಲಿ ಸಹಜ ಸಾವನ್ನು ತ್ವರಿತಗೊಳಿಸುವುದು ಅಪರಾಧವಲ್ಲ ಎಂದೂ ಹೇಳಿತ್ತು.

ದಯಾಮರಣದ ಚರ್ಚೆ ಭಾರತದಲ್ಲಿ ತೀವ್ರತೆ ಪಡೆದದ್ದು ಮುಂಬೈನ ಕೆಇಎಂ ಆಸ್ಪತ್ರೆಯ ನರ್ಸ್, ಕನ್ನಡತಿ ಅರುಣಾ ಶಾನಭಾಗ್ ಪ್ರಕರಣದಲ್ಲಿ. ವಿವಾಹ ನಿಶ್ಚಯವಾಗಿದ್ದ ಅರುಣಾ ಅವರ ಮೇಲೆ ಅದೇ ಆಸ್ಪತ್ರೆಯ ವಾರ್ಡ್ ಬಾಯ್ 1973ರ ನ. 27ರಂದು ಅತ್ಯಾಚಾರ ಎಸಗಿದ್ದ. ಈ ಸಂದರ್ಭದಲ್ಲಿ ಅರುಣಾ ಅವರ ಕುತ್ತಿಗೆಗೆ ನಾಯಿಯನ್ನು ಕಟ್ಟಿಹಾಕುವ ಚೈನ್ ಅನ್ನು ಬಿಗಿದಿದ್ದರಿಂದ ಆಕೆಯ ಮೆದುಳಿಗೆ ಆಮ್ಲಜನಕ ಪೂರೈಕೆ ಸ್ಥಗಿತಗೊಂಡು ಮೆದುಳು ನಿಷ್ಕ್ರಿಯವಾಗಿತ್ತು. ಜೀವಂತ ಶವವಾಗಿ ಸುಮಾರು 42 ವರ್ಷಗಳ ಕಾಲ ಆಸ್ಪತ್ರೆಯಲ್ಲಿ ಕಾಲ ಕಳೆದಿದ್ದ ಅರುಣಾ ಅವರ ಸ್ಥಿತಿ ನೋಡಿ ಪತ್ರಕರ್ತೆ ಪಿಂಕಿ ಇರಾನಿ 2009ರಲ್ಲಿ ದಯಾಮರಣ ಕೋರಿ ಸುಪ್ರೀಂ ಕೋರ್ಟ್ ಕದ ತಟ್ಟಿದ್ದರು. ಆದರೆ, ಕೋರ್ಟ್ ಇದಕ್ಕೆ ಸಮ್ಮತಿಸಲಿಲ್ಲ. ಪರೋಕ್ಷ ದಯಾಮರಣಕ್ಕೂ ಒಪ್ಪಿಗೆ ನೀಡಿರಲಿಲ್ಲ. ಕೊನೆಗೆ 2015ರಲ್ಲಿ ಅರುಣಾ ಮೃತಪಟ್ಟಿದ್ದರು.

ರಾಜ್ಯದಲ್ಲಿ ದಯಾಮರಣ ಕುರಿತು 24 ವರ್ಷಗಳ ಹಿಂದೆ ಹೋರಾಟ ಆರಂಭಿಸಿದ್ದ ನಿವೃತ್ತ ಶಿಕ್ಷಕಿ ಎಚ್.ಬಿ. ಕರಿಬಸಮ್ಮ ಅವರ ಶಿಷ್ಯ, ವಿಧಾನಪರಿಷತ್‌ನ ಅಂದಿನ ಮುಖ್ಯಸಚೇತಕ ಡಾ. ಎ.ಎಚ್. ಶಿವಯೋಗಿಸ್ವಾಮಿ ಅವರು 2012ರಲ್ಲಿ ವಿಧಾನಪರಿಷತ್ತಿನ ಅಧಿವೇಶನದಲ್ಲಿ ಚರ್ಚೆಯನ್ನೂ ನಡೆಸಿದ್ದರು.

ದಯಾಮರಣ ಕುರಿತು ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪು ಗಮನಸೆಳೆದಿದ್ದು 2018ರ ಮಾರ್ಚ್‌ನಲ್ಲಿ. 'ಜನರಿಗೆ ಗೌರವಪೂರ್ವಕವಾಗಿ ಸಾವನ್ನಪ್ಪುವ ಹಕ್ಕಿದೆ' ಎಂದು ಅಭಿಪ್ರಾಯಪಟ್ಟಿದ್ದ ಸುಪ್ರೀಂ ಕೋರ್ಟ್, ದಯಾಮರಣಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರಚನೆ ಮಾಡಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಅದರ ಮುಂದುವರಿದ ಭಾಗವಾಗಿಯೇ, ಸುಪ್ರೀಂ ಕೋರ್ಟ್ 2023ರ ಜನವರಿ 24ರಂದು ಘನತೆಯಿಂದ ಸಾಯುವ ಹಕ್ಕನ್ನು ಸಾಧ್ಯವಾಗಿಸುವ ಬಗ್ಗೆ ಸ್ಪಷ್ಟವಾಗಿ ನಿರ್ದೇಶನ ನೀಡುವ ಜತೆಗೆ 'ಮರಣ ಇಚ್ಛೆಯ ಉಯಿಲು' ರಚಿಸಲು ಅವಕಾಶ ಕಲ್ಪಿಸಿತ್ತು. ಇದೀಗ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಕರ್ನಾಟಕ ಅನುಷ್ಠಾನ ಮಾಡಲು ಮುಂದಾಗಿದೆ.

